# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ–1/242/2025–26 ದಿನಾಂಕ: 06.04.2026

## ಸುತ್ತೋಲೆ

**ವಿಷಯ:** ಕರಾಮುವಿ ನಿಲಯದ 2025–26ನೇ ಸಾಲಿನ 30ನೇ ವಾರ್ಷಿಕ ವರದಿಯನ್ನು ಸಿದ್ಧಪಡಿಸುವ ಬಗೆಗೆ.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 02.04.2026

********

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ಸಿದ್ಧಪಡಿಸುವ ಸಂಬಂಧ ಪ್ರತಿ ವರ್ಷದಂತೆ ಈ ವರ್ಷವೂ ಸಹ 2025–26ನೇ ಸಾಲಿನ 30ನೇ ವಾರ್ಷಿಕ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಹಾಗೂ ಘನತವೆತ್ತ ಕುಲಾಧಿಪತಿಗಳಿಗೆ ನಿಗದಿತ ಸಮಯದಲ್ಲಿ ಸಲ್ಲಿಸಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗದ ಮುಖ್ಯಸ್ಥರು 2025–26ನೇ ಸಾಲಿನಲ್ಲಿ ತಮ್ಮ ವಿಭಾಗದ ಅಧ್ಯಾಪಕರುಗಳು ನಿರ್ವಹಿಸಿದಂತಹ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದ ವಿವರಗಳನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯವು ಒದಗಿಸುವ "Profile" ನಲ್ಲಿ ಸ್ಫುಟವಾಗಿ, ವಿವರವಾಗಿ ಮತ್ತು ಕಡ್ಡಾಯವಾಗಿ ಕನ್ನಡ ಹಾಗೂ ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಡಿ.ಟಿ.ಪಿ ಮಾಡಿಸಿ ಹಾರ್ಡ್ ಮತ್ತು ಸಾಫ್ಟ್ ಕಾಪಿಗಳನ್ನು (ಕಡ್ಡಾಯವಾಗಿ ನುಡಿ ತಂತ್ರಾಂಶದಲ್ಲಿ) **ದಿನಾಂಕ: 05/05/2026** ರೊಳಗಾಗಿ ತಪ್ಪದೇ ಉಪಕುಲಸಚಿವರು, ಆಡಳಿತ ವಿಭಾಗ, ಇವರಿಗೆ ನಿಗದಿತ ನಮೂನೆಯಲ್ಲಿ ಹಾಗೂ ಕುಲಸಚಿವರ **E-Mail-ID: registrar-ksou@ka.gov.in** ಗೆ ಸಲ್ಲಿಸುವಂತೆ ಸೂಚಿಸಿದೆ. ಹಾಗೆಯೇ ತಮ್ಮ ವಿಭಾಗದ ವತಿಯಿಂದ ಕೈಗೊಂಡ ಶೈಕ್ಷಣಿಕ ಚಟುವಟಿಕೆಗಳ ಸಂಕ್ಷಿಪ್ತ ವರದಿಯನ್ನು ಆಯಾ ಅಧ್ಯಯನ ವಿಭಾಗದ ಮುಖ್ಯಸ್ಥರುಗಳು ಸಲ್ಲಿಸುವುದು. ವಿಶ್ವವಿದ್ಯಾನಿಲಯದ ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಡೀನ್(ಅಧ್ಯಯನ ಕೇಂದ್ರಗಳು) ಹಾಗೂ ವಿಭಾಗಗಳು, ತಮ್ಮ ವಿಭಾಗಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಡಿ.ಟಿ.ಪಿ ಮಾಡಿಸಿದ ಹಾರ್ಡ್ ಮತ್ತು ಸಾಫ್ಟ್ ಕಾಪಿಯನ್ನು (ಕಡ್ಡಾಯವಾಗಿ ನುಡಿ ತಂತ್ರಾಂಶದಲ್ಲಿ) **ದಿನಾಂಕ: 05/05/2026**ರೊಳಗೆ ನಿಗದಿತ ನಮೂನೆಯಲ್ಲಿ ಸಲ್ಲಿಸುವಂತೆ ತಿಳಿಸಿದೆ.

ಮುಂದುವರಿದು, ವಿಭಾಗಗಳ ಮುಖ್ಯಸ್ಥರುಗಳು ಹಾಗೂ ಅಧ್ಯಾಪಕರುಗಳು ಕಡ್ಡಾಯವಾಗಿ ನಿಗದಿತ ದಿನಾಂಕದ ಒಳಗಾಗಿ ತಮಗೆ ಸಂಬಂಧಿಸಿದ ಮಾಹಿತಿಯನ್ನು ಸಲ್ಲಿಸುವಂತೆ ತಿಳಿಸಿದೆ. ಒಂದು ವೇಳೆ ಮಾಹಿತಿ ಬಾರದಿದ್ದಲ್ಲಿ ವಿಭಾಗದ / ಅಧ್ಯಾಪಕರ ಬಗ್ಗೆ ಯಾವುದೇ ಮಾಹಿತಿ ಇಲ್ಲವೆಂದು ಪರಿಗಣಿಸಲಾಗುವುದು ಹಾಗೂ ವಿಶ್ವವಿದ್ಯಾನಿಲಯವು ಕೈಗೊಳ್ಳುವ ಕ್ರಮಗಳಿಗೆ ತಾವೇ ಜವಾಬ್ದಾರರೆಂದು ತಿಳಿಸಿದೆ. ಸದರಿ ಸುತ್ತೋಲೆಯನ್ನು ಅಂತಿಮವೆಂದು ಪರಿಗಣಿಸಿ ತಮಗೆ ಸಂಬಂಧಿಸಿದ ಮಾಹಿತಿಯನ್ನು ನಿಗದಿತ ದಿನಾಂಕದೊಳಗಾಗಿ ಕುಲಸಚಿವರಿಗೆ ಸಲ್ಲಿಸುವಂತೆ ಸೂಚಿಸಿದೆ.

**ಕುಲಸಚಿವ**

**ಅಡಕ:** ನಿಗದಿತ ನಮೂನೆಯ ಕನ್ನಡ(ಕಡ್ಡಾಯವಾಗಿ ನುಡಿ ತಂತ್ರಾಂಶದಲ್ಲಿ) ಮತ್ತು ಇಂಗ್ಲೀಷ್ ಪ್ರತಿ.

**ಪ್ರತಿ:**

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಅಧ್ಯಯನ ಕೇಂದ್ರಗಳು), ಕರಾಮುವಿ, ಮೈಸೂರು.
3. ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
4. ಎಲ್ಲಾ ಅಧ್ಯಯನ ವಿಭಾಗಗಳ ಮುಖ್ಯಸ್ಥರು ಹಾಗೂ ಅಧ್ಯಾಪಕರುಗಳು, ಕರಾಮುವಿ, ಮೈಸೂರು.
5. ಗ್ರಂಥಪಾಲಕರು, ಗ್ರಂಥಾಲಯ ವಿಭಾಗ, ಕರಾಮುವಿ, ಮೈಸೂರು.
6. ನಿರ್ದೇಶಕರು, CIQA, R&D, PMEB, NAAC, ICT ಘಟಕ, ಕರಾಮುವಿ, ಮೈಸೂರು.
7. ಎಲ್ಲಾ ಅಧ್ಯಯನ ಪೀಠಗಳ ಅಧ್ಯಕ್ಷರುಗಳು, ಕರಾಮುವಿ, ಮೈಸೂರು.
8. ಎಲ್ಲಾ ಉಪಕುಲಸಚಿವರು / ಸಹಾಯಕ ಕುಲಸಚಿವರು, ಕರಾಮುವಿ, ಮೈಸೂರು.
9. ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕರಾಮುವಿ, ಮೈಸೂರು.
10. ನಿರ್ದೇಶಕರು, ಪ್ರಸಾರಾಂಗ ವಿಭಾಗ/ಐಟಿ ವಿಭಾಗ, ಕರಾಮುವಿ, ಮೈಸೂರು.
11. ಸಂಯೋಜನಾಧಿಕಾರಿಗಳು, ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ / ಎನ್.ಎಸ್.ಎಸ್. ಘಟಕ / ಆಡಿಯೋ–ವಿಡಿಯೋ ಸ್ಟುಡಿಯೋ / ಉದ್ಯೋಗ ವಿನಿಮಯ ಕೇಂದ್ರ, ಕರಾಮುವಿ, ಮೈಸೂರು.
12. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
13. ಡಾ.ನವೀನ್ ಕುಮಾರ್.ಸಿ.ಜಿ, ನೋಡಲ್ ಆಫೀಸರ್, ವೆಬ್‌ಸೈಟ್, ಕರಾಮುವಿ, ಮೈಸೂರು.
    ಇವರಿಗೆ ಈ ಪ್ರಕಟಣೆಯನ್ನು ವಿವಿ ನಿಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ.
14. ಕಚೇರಿ ಪ್ರತಿ.